International Journal of Kannada Research 2016; 2(4): 165-169




International Journal of Kannada Research
www.kannadajournal.com

**ISSN: 2454–5813**
IJSR 2016; 2(4): 165-169
© 2016 IJKS
www.kannadajournal.com
Received: 29-08-2016
Accepted: 30-09-2016

**Dr. Kalaswamyh N**
Ugc-Post Doctoral Fellow
D.O.S. In Ancient History And Archaeology Manasagangothri Mysore-570006 University of Mysore, Karnataka State, India

**Correspondence**
**Dr. Kalaswamyh N**
Ugc-Post Doctoral Fellow
D.O.S. In Ancient History And Archaeology Manasagangothri Mysore-570006 University of Mysore, Karnataka State, India

# ಕೋಟೆಕೆರೆ ಗ್ರಾಮದಲ್ಲಿ ದೊರೆತ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು

**Dr. Kalaswamyh N**

ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿಗೆ ಸೇರಿದ ಕೋಟೆಕೆರೆ ಗ್ರಾಮವು ಬೇಗೂರಿನ ಪಶ್ಚಿಮಕ್ಕೆ ಸು. ೪ ಕಿ.ಮೀ ದೂರದಲ್ಲಿದೆ. ಇದು ಇತಿಹಾಸದ ಹಿನ್ನೆಲೆಯುಳ್ಳ ಗ್ರಾಮವಾಗಿದ್ದು ಪ್ರಾಚೀನ ಕಾಲದಿಂದಲೂ ಈ ಪ್ರಾಂತ್ಯದಲ್ಲಿ ಗಂಗರು, ಚೋಳರು, ಹೊಯ್ಸಳರು, ಉಮ್ಮತ್ತೂರಿನ ಪಾಳೇಗಾರರು ಮತ್ತು ತೆರಕಾಂಬಿ ಪಾಳೇಗಾರರು ಹಾಗೂ ಮೈಸೂರಿನ ಒಡೆಯರು ಆಳ್ವಿಕೆ ನಡೆಸಿದ ಬಗ್ಗೆ ಇಲ್ಲಿ ದೊರೆಯುವ ಶಾಸನಗಳು ಸ್ಪಷ್ಟಪಡಿಸುತ್ತವೆ. ಹೀಗಾಗಿ ಸಂಶೋಧನಾ ಕಾರ್ಯ ನಿಮಿತ್ತ ಕ್ಷೇತ್ರಕಾರ್ಯಗೊಂಡು ಸುಮಾರು ೧೧ ವೀರಗಲ್ಲು ಮತ್ತು ೫ ವೀರ ಮಾಸ್ತಿಕಲ್ಲುಗಳು ಈ ಗ್ರಾಮದಲ್ಲಿ ದೊರೆತ್ತಿದ್ದು ಈ ಕೆಳಕಂಡಂತೆ ಅವುಗಳ ವಿವರಣೆಯನ್ನು ನೀಡುವುದು ಈ ಲೇಖನದ ಪ್ರಮುಖ ಉದ್ಧೇಶವಾಗಿದೆ.

**೧.ವೀರಗಲ್ಲು:** ಈ ವೀರಗಲ್ಲು ಗ್ರಾಮದ ಮಧ್ಯಭಾಗದಲ್ಲಿ ದೊರೆತಿದ್ದು ಸು.೩ ಅಡಿ ಎತ್ತರ, ೨ ಅಡಿ ಅಗಲ, ೫ ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಗ್ರಾನೈಟ್ ಶಿಲೆಯದ್ದಾಗಿದೆ. ಮೊದಲನೆ ಪಟ್ಟಿಕೆಯಲ್ಲಿ ಮೂರು ಜನ ವೀರ ಪುರುಷರಿದ್ದು ಪರಸ್ಪರ ವಿರುದ್ದ ದಿಕ್ಕಿನಲ್ಲಿ ಬಿಲ್ಲು, ಬಾಣಗಳನ್ನು ಹಿಡಿದು ಹೋರಾಡುತ್ತಿರುವ ದೃಶ್ಯ. ಇವರ ಹಿಂಭಾಗದಲ್ಲಿ ಎರಡು ಗೋವುಗಳ ಉಬ್ಬುಶಿಲ್ಪದ ಕೆತ್ತನೆಯಿದೆ. ಎರಡನೇ ಪಟ್ಟಿಕೆಯಲ್ಲಿ ದೇವ ಕನ್ಯೆಯರು ಚಾಮರಧಾರಿಣಿಯರಾಗಿ ಯುದ್ಧದಲ್ಲಿ ಮಡಿದ ವೀರನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು, ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಯತಿ, ಆತನ ಹಿಂಭಾಗದಲ್ಲಿ ನಂದಿಯ ಶಿಲ್ಪ, ಬಲಭಾಗದಲ್ಲಿ ಭಕ್ತನು ಕೈಮುಗಿದು ಕುಳಿತಿರುವ ಚಿತ್ರ, ಜೊತೆಗೆ ಸೂರ್ಯ, ಚಂದ್ರರ ಉಬ್ಬು ಶಿಲ್ಪಗಳಿರುವುದನ್ನು ಕಾಣಬಹುದು.

**೨.ವೀರಗಲ್ಲು:** ಈ ವೀರಗಲ್ಲು ಸು.೨.೫ ಅಡಿ ಎತ್ತರ, ೨ ಅಡಿ ಅಗಲ, ೪ ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಗ್ರಾನೈಟ್ ಶಿಲೆಯದ್ದಾಗಿದೆ. ಒಂದನೇ ಪಟ್ಟಿಕೆಯಲ್ಲಿ ಇಬ್ಬರು ವೀರಪುರುಷರು ಪರಸ್ಪರ ವಿರುದ್ದ ದಿಕ್ಕಿನಲ್ಲಿ ಯುದ್ಧೋಪಕರಣಗಳನ್ನು ಹಿಡಿದು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯ.. ಎರಡನೇ ಪಟ್ಟಿಕೆಯಲ್ಲಿ ಇಬ್ಬರು ದೇವ ಕನ್ಯೆಯರು ಚಾಮರಧಾರಿಣಿಯರಾಗಿ ಯುದ್ಧದಲ್ಲಿ ಮಡಿದ ವೀರನನ್ನು ಆತನ ಕೈಹಿಡಿದು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ನಂದಿ ಕಂಬವಿದ್ದು, ಬಲಭಾಗದಲ್ಲಿ ಭಕ್ತನು ಕೈಮುಗಿದು ಕುಳಿತಿರುವ ದೃಶ್ಯ ಕಂಡು ಬಂದಿದ್ದು ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಉಬ್ಬು ಶಿಲ್ಪಗಳ ಕೆತ್ತನೆಯನ್ನು ಕಾಣಬಹುದು.

**೩.ವೀರಗಲ್ಲು:** ಈ ವೀರಗಲ್ಲು ಸು.೩ ಅಡಿ ಎತ್ತರ, ೩ ಅಡಿ ಅಗಲ, ೫ ಇಂಚು ದಪ್ಪನಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಮೂರು ಪಟ್ಟಿಕೆಗಳನ್ನು ಒಳಗೊಂಡಿದೆ. ಮೊದಲನೇ ಪಟ್ಟಿಕೆಯಲ್ಲಿ ಐದು ಜನ ವೀರರು ಕತ್ತಿ, ಗುರಾಣಿಯನ್ನು ಹಿಡಿದು ಯುದ್ಧಕ್ಕೆ ಹೊರಟು ನಿಂತಿದ್ದು ಈ ವೀರರು ವಸ್ತ್ರಾಧಾರಿಯಾಗಿ ಸೊಂಟದಲ್ಲಿ ಪಂಚೆಯನ್ನು ಕಚ್ಚೆಯ ರೀತಿಯಲ್ಲಿ ಕಟ್ಟಿದ್ದು ಕೈಗಳಲ್ಲಿ ಕೈಕಡಗ, ಕಾಲುಗಳಲ್ಲಿ ಕಾಲುಬಂದಿ, ಕರ್ಣಕುಂಡಲ ಹಾಗೂ ಕೇಶವನ್ನು ಉರುಳೆಯ ರೀತಿಯಲ್ಲಿ ಕಟ್ಟಿದ್ದು ದಪ್ಪನಾದ ಮೀಸೆಯನ್ನು ಹೊಂದಿದ ರಾಜರ ಕೆತ್ತನೆಯನ್ನು ಖಂಡರಿಸಲಾಗಿದೆ. ಎರಡನೇ ಪಟ್ಟಿಕೆಯಲ್ಲಿ ಈ ಯುದ್ಧದಲ್ಲಿ ಮಡಿದ ಮೂರು ಜನ ವ್ಯಕ್ತಿಗಳನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ನಂದಿ ಕಂಬವಿದ್ದು ಎಡಭಾಗದಲ್ಲಿ ಒಬ್ಬ ಸ್ತ್ರೀ, ಬಲಭಾಗದಲ್ಲಿ ಭಕ್ತ ಮತ್ತು ಇಬ್ಬರು ಸ್ತ್ರೀಯರು ಕೈಮುಗಿದು ಕುಳಿತ್ತಿದ್ದು ಬಹುಶಃ ಇವರು

ಯುದ್ಧದಲ್ಲಿ ಮಡಿದ ರಾಜರ ಪತ್ನಿಯರಾಗಿದ್ದು ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಉಬ್ಬು ಶಿಲ್ಪದ ಕೆತ್ತನೆಯನ್ನು ಮಾಡಲಾಗಿದೆ.

**೪.ಒಕ್ಕೈಮಾಸ್ತಿಗಲ್ಲು:** ಇದು ೩ ಅಡಿ ಎತ್ತರ, ೨ ಅಡಿ ಅಗಲವಾಗಿದ್ದು, ಸುಮಾರು ೮ ಇಂಚು ದಪ್ಪನಾಗಿದೆ. ಇದು ಒಂದು ಒಕ್ಕೈಮಹಾಸತಿಕಲ್ಲಾಗಿದ್ದು ಇದನ್ನು ಗ್ರಾನೈಟ್ ಕಲ್ಲಿನಿಂದ ಮಾಡಲಾಗಿದೆ. ಸಾಮಾನ್ಯವಾಗಿ ಮಹಾಸತಿ ಕಲ್ಲಿನಲ್ಲಿ ಕಂಬವನ್ನು ಕೆತ್ತಿದ್ದು ಅದರ ಬಲಕ್ಕೆ ತೋಳನ್ನು ಮುಂಚಾಚಿ ಕೈಯನ್ನು ಮೇಲೆಕ್ಕೆತ್ತಿರುವ ಶಿಲ್ಪಗಳು ದೊರೆತಿವೆ. ಕೆಲವು ಸಂದರ್ಭಗಳಲ್ಲಿ ೨,೩ ಕೈಗಳನ್ನು ಮೇಲೆಕ್ಕೆತ್ತಿರುವಂತೆಯೂ ಹಾಗೂ ಇಬ್ಬರು, ಮೂವರು ಪತ್ನಿಯರನ್ನು ತೋರಿಸುವ ಮಹಾಸತಿ ಕಲ್ಲುಗಳಿವೆ. ಆದರೆ ಇಲ್ಲಿ ಪತಿ–ಪತ್ನಿಯರ ಚಿತ್ರಗಳನ್ನು ಕೆತ್ತಿದ್ದಾರೆ. ರಾಜನು ಬಹಳ ಹಸನ್ಮುಖಿಯಾಗಿದ್ದು ಅವನ ಪತ್ನಿಯು ಸಹ ಹಸನ್ಮುಖಿಯಾಗಿದ್ದಾಳೆ ಹಾಗೂ ವೀರನ ಬಲಭಾಗದಲ್ಲಿ ಆತನ ಪತ್ನಿಯು ಜೊತೆಗೂಡಿ ಒಂದು ಸಣ್ಣ ಪೀಠದಲ್ಲಿ ನಿಂತಿರುವಂತೆ ತೋರಿಸಿದ್ದಾನೆ. ಈತನ ಪತ್ನಿಯು ಬಲಗೈಯನ್ನು ಮೇಲ್ಭಾಗಕ್ಕೆ ಎತ್ತಿ ಆಶೀರ್ವದಿಸುವಂತಿದ್ದು ಮಹಾಸತಿಯ ಬಲಗೈ ಶುಭದ ಸಂಕೇತವಾಗಿದೆ ಹಾಗೂ ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿರುವಂತೆ ಕೆತ್ತಲಾಗಿದೆ. ತಲೆಯ ಎಡಭಾಗದಲ್ಲಿ ಪತಿ–ಪತ್ನಿ ಇಬ್ಬರೂ ಉರುಳೆಯಂತೆ ಮುಡಿಯನ್ನು ಕಟ್ಟಿದ್ದಾರೆ. ಕತ್ತಿನಲ್ಲಿ ಇಳಿಬಿಟ್ಟ ಕಂಠೀಹಾರವಿದೆ. ಹಾಗೂ ವಸ್ತ್ರವನ್ನು ಧರಿಸಿರುವುದು ಬಹಳ ಸುಂದರವಾಗಿ ಕಾಣುವಂತೆ ಚಿತ್ರಿಸಿದ್ದಾನೆ. ಮುಂಗೈಯಲ್ಲಿ ಬಳೆಗಳನ್ನು ತೋಳಿನಲ್ಲಿ ತೋಳುಬಂದಿಯನ್ನು ಕೆತ್ತಲಾಗಿದೆ. ಕೊರಳಲ್ಲಿ ತುಂಬಾ ವಿವಿಧ ರೀತಿಯ ಹಾರಗಳಿವೆ. ಕಿವಿಯ ಕರ್ಣಕುಂಡಲವು ಚಪ್ಪಟೆಯಂತಿದೆ. ಇಲ್ಲಿ ವೀರನು ನಿಂತಿರುವ ಭಂಗಿಯು ಬಹಳ ವೈಶಿಷ್ಟ್ಯಪೂರ್ಣವಾಗಿದೆ. ವೀರರ ಎರಡು ಕಾಲಿನ ಮಧ್ಯಭಾಗದಲ್ಲಿ ಹೂವನ್ನು ಚಿತ್ರಿಸಲಾಗಿದೆ. ಸಹಗಮನವಾಗುವಾಗ ಅವಳಿಗೆ ರಾಜ್ಯದ ರಾಜರು ಅಥವಾ ಆಡಳಿತ ಅಧಿಕಾರಿಗಳು ಅರಿಶಿನ, ಕುಂಕುಮ, ತಾಂಬೂಲ, ಛತ್ರಿ, ನಿಂಬೆಹಣ್ಣು, ಕಳಸ,ಹೂವು ಮುಂತಾದವುಗಳನ್ನು ಕೊಡುತ್ತಿದ್ದ ಪದ್ಧತಿ ಇದ್ದಿತು. ಈ ರೀತಿಯಲ್ಲಿ ಇಲ್ಲಿ ಹೂವನ್ನು ಚಿತ್ರಿಸಲಾಗಿದೆ ಹಾಗೂ ಕಂಬದಲ್ಲಿ ಬಲಗೈಯನ್ನು ಕೆತ್ತಿರುವುದು ಬಹಳ ಸುಂದರವಾದ ಚಿತ್ರಗಳಿಂದ ಅಲಂಕೃತಗೊಂಡಂತಿವೆ ಎಂದು ಹೇಳಿದರೆ ತಪ್ಪಾಗಲಾರದು.

**೫.ವೀರಗಲ್ಲು:** ಇದು ೪ ಅಡಿ ಎತ್ತರ ಕೆಳಗಿನಿಂದ ಮೇಲಕ್ಕೆ ಹೋದಂತೆ ೧.೫ ಅಡಿಯಿಂದ ೨ ಅಡಿ ಅಗಲವಾಗಿದ್ದು ೬ ಇಂಚು ದಪ್ಪನಾಗಿದ್ದು ಮೂರು ಪಟ್ಟಿಕೆಗಳಿಂದ ಕೂಡಿದೆ. ಒಂದನೇ ಪಟ್ಟಿಕೆಯಲ್ಲಿ ಮೂರು ಜನ ವೀರರು ಕತ್ತಿ, ಗುರಾಣಿಯನ್ನು ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೋರಾಡುತ್ತಿರುವ ದೃಶ್ಯ ಕಂಡುಬಂದಿದ್ದು ಮಧ್ಯಭಾಗದಲ್ಲಿರುವ ವ್ಯಕ್ತಿಗೆ ಎಡ ಮತ್ತು ಬಲಭಾಗದಿಂದ ಇಬ್ಬರು ವೀರರು ಕತ್ತಿಯಿಂದ ಚುಚ್ಚುತ್ತಿರುವುದು ಕಂಡುಬಂದಿರುವುದು. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ವಸ್ತ್ರಧಾರಿತ ದೇವಕನ್ಯೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಅಲಂಕಾರಭರಿತವಾದ ಪ್ರಭಾವಳಿಯಲ್ಲಿ ಪ್ರತಿಷ್ಠಾಪಿಸಲಾದ ಶಿವಲಿಂಗವಿದ್ದು ಇದರ ಎಡಭಾಗದಲ್ಲಿ ಒಬ್ಬ ವ್ಯಕ್ತಿಯು ಸಮಭಂಗಿಯಲ್ಲಿ ನಿಂತಿದ್ದು ಹಿಂಭಾಗದಲ್ಲಿ ನಂದಿಯ ಉಬ್ಬುಶಿಲ್ಪದ ಕೆತ್ತನೆಯಿದೆ ಹಾಗೂ ಬಲಭಾಗದಲ್ಲಿ ಯತಿಯು ಕೈಮುಗಿದು ಕುಳಿತಿರುವುದು ಹಾಗೂ ಈತನ ಪಕ್ಕದಲ್ಲಿ ಭಕ್ತನು ಕೈಮುಗಿದು ಕುಳಿತಿರುವ ದೃಶ್ಯವನ್ನು ಕಾಣಬಹುದು.

**೬.ವೀರಗಲ್ಲು:** ಇದೊಂದು ವೀರಗಲ್ಲಾಗಿದ್ದು ಸುಮಾರು ೨ ಅಡಿ ಎತ್ತರ, ೧.೫ ಅಡಿ ಅಗಲ, ೬ ಇಂಚು ದಪ್ಪನಾಗಿದ್ದು ಒಂದು ಪಟ್ಟಿಕೆಯಿಂದ ಕೂಡಿದೆ. ಇದರಲ್ಲಿ ವ್ಯಕ್ತಿಗಳು ಕೈಗಳಲ್ಲಿ ಕತ್ತಿ ಮತ್ತು ಗುರಾಣಿಯನ್ನು ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೋರಾಡುತ್ತಿರುವ ದೃಶ್ಯ ಚಿತ್ರದಲ್ಲಿ ಮೂಡಿಬಂದಿದ್ದು ಇದರ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಉಬ್ಬ ಶಿಲ್ಪದ ಕೆತ್ತನೆಯನ್ನು ಮಾಡಲಾಗಿದೆ.

**೭.ವೀರಮಾಸ್ತಿಕಲ್ಲು:** ಊರಿನ ಪಕ್ಕದಲ್ಲಿ ಕೆರೆಯ ಅಂಚಿನಲ್ಲಿದ್ದು ಇದು ಸುಮಾರು ೩ ಅಡಿ ಎತ್ತರ, ೧.೫ ಅಡಿ ಅಗಲ, ೬ ಇಂಚು ದಪ್ಪನಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಮೂರು ಹಂತಗಳಿಂದ ಕೂಡಿದೆ. ಒಂದನೇ ಹಂತದಲ್ಲಿ ವೀರನು ವಸ್ತ್ರಾಧಾರಿಯಾಗಿದ್ದು ಯುದ್ಧದ ಆಯುಧೋಪಕರಣಗಳನ್ನು ಹಿಡಿದು ಯುದ್ಧಕ್ಕೆ ಸನ್ನದ್ಧರಾಗಿ ನಿಂತಿರುವುದು ಎಡಭಾಗದಲ್ಲಿ ಈತನ ಹೆಂಡತಿಯು ನಿಂತಿರುವ ದೃಶ್ಯ. ಎರಡನೇ ಹಂತದಲ್ಲಿ ಈ ಯುದ್ಧದಲ್ಲಿ ಮಡಿದ ವೀರನನ್ನು ಇಬ್ಬರು ಚಾಮರಧಾರಿಣಿ ದೇವಕನ್ಯೆಯರು ಆತನ ಎರಡು ಕೈಗಳನ್ನು ಹಿಡಿದು ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಹಂತದಲ್ಲಿ ಸುಮಾರು ೨ ಅಡಿ ಎತ್ತರದ ಶಿವಲಿಂಗವಿದ್ದು ಯತಿಯು ಶಿವಲಿಂಗಕ್ಕೆ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದು ಎಡಭಾಗದಲ್ಲಿ ನಂದಿಯ ಶಿಲ್ಪವಿದೆ. ಇದಕ್ಕೆ ಭಕ್ತನು ಹಿಂಬದಿಯಿಂದ ನಮಸ್ಕರಿಸುತ್ತಿರುವ ದೃಶ್ಯವು ಈ ವೀರಮಾಸ್ತಿಕಲ್ಲಿನಲ್ಲಿ ಮೂಡಿಬಂದಿದೆ.

**೮.ವೀರಗಲ್ಲು:** ಈ ವೀರಗಲ್ಲು ೩ ಅಡಿ ಎತ್ತರ ಮತ್ತು ೩ ಅಡಿ ಅಗಲವಾಗಿದ್ದು ೫ ಇಂಚು ದಪ್ಪನಾಗಿದೆ. ಈ ಚಿತ್ರದಲ್ಲಿ ಕಾಣುವ ವೀರಗಲ್ಲನ್ನು ಅಧ್ಯಯನ ಮಾಡಿದಾಗ ಇಲ್ಲಿ ಇಬ್ಬರು ವ್ಯಕ್ತಿಗಳು ಮತ್ತು ಒಂದು ಚಿಕ್ಕ ಮಗುವಿನ ಚಿತ್ರವಿರುವುದನ್ನು ಕಾಣುತ್ತೇವೆ. ಆದರೆ ಇಲ್ಲಿ ಯಾವುದೇ ರೀತಿಯ ಶಾಸನಗಳು ಕಂಡು ಬರುವುದಿಲ್ಲ. ಆದ್ದರಿಂದ ಇವುಗಳನ್ನು ಸ್ಪಷ್ಟವಾಗಿ ಗುರುತಿಸಲು ಅಸಾಧ್ಯವಾದರೂ ಸಹ ಇಲ್ಲಿ ಮೂಡಿ ಬಂದಿರುವ ಇಬ್ಬರು ವ್ಯಕ್ತಿಗಳು ಕೂದಲನ್ನು ಉರುಳೆಯ ರೀತಿಯಲ್ಲಿ (ಜಡೆ) ಕಟ್ಟಿದ್ದು ಇದರಿಂದ ಇವು ಸ್ತ್ರೀ ಹಾಗೂ ಪುರುಷ ಚಿತ್ರಗಳು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತವೆ. ಜೊತೆಗೆ ಮಗು ಇದ್ದರೂ ಸಹ ಕಲ್ಯಾಣವೊಂದು ನಡೆದು ಯಾವುದೋ ಒಂದು ತ್ಯಾಗಕ್ಕಾಗಿ ಇವರುಗಳು ಒಟ್ಟಾಗಿ ಹಾರವಾಗಿರುವುದು (ಸಮರ್ಪಣೆ) ಕಂಡುಬರುತ್ತದೆ ಹಾಗೂ ಪರಸ್ಪರ ಕೈಗಳನ್ನು ಹಿಡಿದುಕೊಂಡು ಸಾಲಾಗಿ ನಿಂತಿರುವುದು ತ್ಯಾಗ ಮತ್ತು ಉಂಜರ ಸಮಯದಲ್ಲಿರುವಾಗ ಕಟ್ಟನ್ನು ತಾವು ಸಂತೋಷವಾಗಿ ಅರ್ಪಿಸಿಗೊಂಡಿರುವುದು ನಂಬಲಾರ್ಹವಾದುದು ಎಂಬ ವಿಷಯವನ್ನು ಈ ಚಿತ್ರದಿಂದ ತಿಳಿಯಬಹುದು.

**೯.ವೀರಗಲ್ಲು:** ಇದು ಊರಿನ ಪಕ್ಕದಲ್ಲಿರುವ ಕೆರೆಯ ಹತ್ತಿರದ ಜಮೀನಿನಲ್ಲಿದ್ದು ಸುಮಾರು ೧.೫ ಅಡಿ ಎತ್ತರ, ೨ ಅಡಿ ಅಗಲ, ೬ ಇಂಚು ದಪ್ಪನಾಗಿದ್ದು ಗ್ರಾನೈಟ್ ಶಿಲೆಯಾಗಿದ್ದು ಸ್ವಲ್ಪ ತ್ರುಟಿತವಾಗಿದೆ. ಇದು ಒಂದನೇ ಪಟ್ಟಿಕೆಯನ್ನು ಮಾತ್ರ ಹೊಂದಿದ್ದು ಇದರಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ಇಬ್ಬರು ಚಾಮರಧಾರಿಣಿ ದೇವಕನ್ಯೆಯರನ್ನು ದೇವಲೋಕಕ್ಕೆ ಕರೆದೊಯ್ಯುತ್ತಿದ್ದು ಇದರ ಮೇಲ್ಭಾಗದಲ್ಲಿ ದೇವತಾ ಮೂರ್ತಿಯಿದ್ದು ಈತನು ಕೈಯನ್ನು ಎತ್ತಿ ಆಶೀರ್ವದಿಸುತ್ತಿರುವ ದೃಶ್ಯವನ್ನು ಕಾಣಬಹುದು.

**೧೦.ವೀರಮಾಸ್ತಿಕಲ್ಲು:** ಸುಮಾರು ೧.೫ ಅಡಿ ಎತ್ತರ, ೨ ಅಡಿ ಅಗಲ, ೬ ಇಂಚು ದಪ್ಪನಾಗಿರುವ ಒಂದೇ ರೀತಿಯ ಅಳತೆಯುಳ್ಳ ೩ ವೀರಗಲ್ಲುಗಳು ದೊರೆತ್ತಿದ್ದು ಒಂದು ಪಟ್ಟಿಕೆಯಿಂದ ಕೂಡಿದವುಗಳಾಗಿವೆ. ಇದರಲ್ಲಿ ಪತಿ ಪತ್ನಿಯರಿಬ್ಬರು ಯುದ್ಧದಲ್ಲಿ ಹೋರಾಡಿ ಮಡಿದ ದೃಶ್ಯವನ್ನು ಕೆತ್ತನೆ ಮಾಡಿದ್ದು ಒಟ್ಟಾಗಿ ಹಾರವಾಗಿರುವ ದೃಶ್ಯವನ್ನು ಚಿತ್ರದಲ್ಲಿ ಕಾಣಬಹುದು. (ಚಿತ್ರ. ೧೦, ೧೧,೧೨)

**೧೩.ವೀರಗಲ್ಲು:** ಈ ವೀರಗಲ್ಲು ರಾಮಲಿಂಗದೇವರ ಗುಡಿಯ ಹತ್ತಿರವಿದೆ. ಈ ವೀರಗಲ್ಲು ಕಪ್ಪು ಗ್ರಾನೈಟ್ ಶಿಲೆಯಾಗಿದ್ದು ಸುಮಾರು ೩ ಅಡಿ ಎತ್ತರ, ೩ ಅಡಿ ಅಗಲವಾಗಿದ್ದು ಇದೊಂದು ಗೋಗ್ರಹಣದ ವೀರಗಲ್ಲಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆ ಪಟ್ಟಿಕೆಯಲ್ಲಿ ಒಬ್ಬ ವೀರಯೋಧ ಗೂಳಿಗೆ ಎದುರಾಗಿ ಕತ್ತಿಯನ್ನು ವೀರಾವೇಶದಿಂದ ಚುಚ್ಚುತ್ತಿರುವ ದೃಶ್ಯ. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಇಬ್ಬರು ಚಾಮರಧಾರಿಣಿ ದೇವಕನ್ಯೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ ಸುಂದರವಾದ ೨.೫ ಅಡಿ ಎತ್ತರ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು ಈ ಶಿವಲಿಂಗಕ್ಕೆ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವ ಯತಿ. ಇವರ ಹಿಂಭಾಗದಲ್ಲಿ ನಂದಿಯ ಉಬ್ಬು ಶಿಲ್ಪದ ಕೆತ್ತನೆಯಿದೆ. ಬಲಭಾಗದಲ್ಲಿ ಭಕ್ತನು ಕೈಮುಗಿದು ಕುಳಿತಿರುವ ದೃಶ್ಯ. ಇದರ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಉಬ್ಬು ಶಿಲ್ಪದ ಕೆತ್ತನೆಯಿದ್ದು ಪ್ರಸ್ತುತ ಈ ಗ್ರಾಮದವರು ಹಬ್ಬ ಹರಿದಿನ ಮತ್ತು ಜಾತ್ರಾ ಮಹೋತ್ಸವದಲ್ಲಿ ಈ ವೀರಗಲ್ಲಿಗೆ ಅರಿಶಿನ ಕುಂಕುಮ ಹಚ್ಚಿ ಮತ್ತು ಎಣ್ಣೆಯನ್ನು ಲೇಪನ ಮಾಡಿ ಇದನ್ನು ವೀರರ ಗುಡಿಯೆಂದೇ ಪರಿಗಣಿಸಿ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸುವ ಪದ್ಧತಿಯಿದೆ.

**೧೪.ಸ್ಮಾರಕ ಶಿಲ್ಪ:** ಈ ಶಿಲ್ಪವು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು ಯೋಧರನ್ನು ಸುಂದರವಾಗಿ ಕೆತ್ತಲಾಗಿದೆ. ಇದರಿಂದ ವೀರನು ಸ್ಥಳೀಯ ಪ್ರಾಂತ್ಯದವನೇ ಇರಬಹುದು ಎಂದು ಹೇಳಿದರೆ ತಪ್ಪಾಗಲಾರದು. ಈತನು ಒಬ್ಬ ಜಟ್ಟಿಯ ರೀತಿಯಲ್ಲಿ ಪಂಚೆಯನ್ನು (ವಸ್ತ್ರ) ಮೇಲೆ ಎತ್ತಿದಂತೆ ಅಂದರೆ ಕಚ್ಚೆಯಂತೆ ಕಟ್ಟಿರುವುದು ಚಿತ್ರದಲ್ಲಿ ಸುಂದರವಾಗಿ ಮೂಡಿ ಬಂದಿದೆ ಹಾಗೂ ಈತನು ಕಂಠದಲ್ಲಿ ಮಣಿಹಾರಗಳನ್ನು ಸರಮಾಲೆಯಾಗಿ ಧರಿಸಿರುತ್ತಾನೆ ಮತ್ತು ಕೈಗಳಿಗೆ ತೋಳುಬಂದಿಯನ್ನು ಧರಿಸಿದ್ದು ಹಾಗೂ ತುಂಬಿದ ಅಗಲವಾದ ದಪ್ಪನೆಯ ಮುಖ ಹೊಂದಿದ್ದು ದಪ್ಪನೆಯ ಮೀಸೆ ಸುಂದರವಾದ ಆಕರ್ಷಕ ಕಣ್ಣುಗಳು ಸೊಗಸಾಗಿ ಈ ಶಿಲ್ಪ ಕಲೆಯಲ್ಲಿ ಮೂಡಿಬಂದಿರುವುದನ್ನು ಕಾಣಬಹುದಾಗಿದೆ. ಈತನು ಕಂಠದಲ್ಲಿ ವಿಶೇಷವಾದ ಕಂಠಾಭರಣಗಳನ್ನು ಧರಿಸಿದ್ದಾನೆ. ಈತನು ಎರಡು ಕೈಗಳಲ್ಲಿಯೂ ಆಯುಧವನ್ನು ಹಿಡಿದಿದ್ದಾನೆ. ಇದರಿಂದ ಈ ಶಿಲ್ಪ ಕಲೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಯುದ್ಧದಲ್ಲಿ ಹೋರಾಡಿದ ದೃಶ್ಯದಂತೆ ಮೂಡಿಬಂದಿದೆ ಎಂದು ಹೇಳಬಹುದು. ಮಹಿಷಮಂಡಲ ಪ್ರಾಂತ್ಯದಲ್ಲಿ ತಲಕಾಡಿನ ಗಂಗರು, ವಿಜಯನಗರದ ಅರಸರು ಇನ್ನಿತರ ಸ್ಥಳೀಯ ಅರಸರು ಆಳ್ವಿಕೆ ಮಾಡಿದ ಈ ಪ್ರಾಂತ್ಯದಲ್ಲಿ ವೈವಿಧ್ಯಮಯವಾದ ಸ್ಮಾರಕ ಶಿಲ್ಪಗಳು ಕಂಡುಬರುತ್ತವೆ. ಈ ಹಿನ್ನೆಲೆಯಿಂದ ಈ ಶಿಲ್ಪವನ್ನು ಗಮನಿಸಿದಾಗ ಒಂದು ದೃಷ್ಟಿಯಲ್ಲಿ ಸ್ಮಾರಕ ಶಿಲ್ಪವಾದರೂ ಮತ್ತೊಂದು ಕಡೆ ವೀರ ಯೋಧನ ಶಿಲ್ಪವೆಂದು ಪರಿಗಣಿಸಬಹುದಾಗಿದೆ.

**೧೫.ವೀರಮಾಸ್ತಿಗಲ್ಲು:** ಇದು ಸುಮಾರು ೧.೫ ಅಡಿ ಎತ್ತರ, ೨ ಅಡಿ ಅಗಲವಾದ ಮೂರು ವೀರಮಾಸ್ತಿಕಲ್ಲುಗಳು ದೊರೆತ್ತಿದ್ದು ಅವುಗಳಲ್ಲಿ ಎರಡು ಕಪ್ಪು ಗ್ರಾನೈಟ್ ಶಿಲೆ ಮತ್ತೊಂದು ಬೂದುಬಣ್ಣದ ಗ್ರಾನೈಟ್ ಶಿಲೆಯದ್ದಾಗಿದೆ. ಒಂದನೇ ಹಂತದಲ್ಲಿ ಇಬ್ಬರು ವೀರರು ಮತ್ತು ಒಬ್ಬ ಸ್ತ್ರೀ ಹಾರವಾಗಿ ನಿಂತಿರುವ ದೃಶ್ಯ. ಎರಡನೆಯದರಲ್ಲಿ ಇಬ್ಬರು ಸ್ತ್ರೀಯರು ವಸ್ತ್ರಾಧಾರಿಯರಾಗಿದ್ದು ಒಬ್ಬ ರಾಜ ಆಯುಧೋಪಕರಣಗಳನ್ನು ಹಿಡಿದು ನಿಂತಿದ್ದಾನೆ. ಇನ್ನೊಂದರಲ್ಲಿ ಭೈರವನ ಶಿಲ್ಪವಿದ್ದು ಭೈರವನು ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ರುಂಡಮಾಲೆ, ಕಿವಿಯಲ್ಲಿ ಕರ್ಣಕುಂಡಲ ಮತ್ತು ಕೇಶವನ್ನು ದುಂಡನೆಯ ರೀತಿಯಲ್ಲಿ ಕಟ್ಟಿದ್ದು ಒಟ್ಟಾರೆ ವಸ್ತ್ರಾಧಾರಿಯಾಗಿದ್ದು ಅತ್ಯಂತ ಸೂಕ್ಷ್ಮ ಕುಸುರಿ ಕೆತ್ತನೆಯನ್ನು ಹೊಂದಿದ್ದು ಸಾಕಷ್ಟು ತ್ರುಟಿತವಾಗಿದೆ. ಹೀಗಾಗಿ ಈ ಮೂರು ವೀರಮಾಸ್ತಿಕಲ್ಲುಗಳು ಒಂದೇ ಸ್ಥಳದಲ್ಲಿ ದೊರೆತಿರುವುದನ್ನು ಕಾಣಬಹುದು.

**೧೬.ವೀರಮಾಸ್ತಿಕಲ್ಲು:** ಇದೊಂದು ವೀರಮಾಸ್ತಿಕಲ್ಲಾಗಿದ್ದು ಸುಮಾರು ೧.೫ ಅಡಿ ಎತ್ತರ ೩ ಅಡಿ ಅಗಲ, ೧೦ ಇಂಚು ದಪ್ಪನಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಒಂದು ಪಟ್ಟಿಕೆಯಿಂದ ಮಾತ್ರ ಕೂಡಿದೆ. ಇದರಲ್ಲಿ ಚಾಮರಧಾರಿಣಿ ದೇವಕನ್ಯೆಯರು ಯುದ್ಧದಲ್ಲಿ ಮಡಿದ ದಂಪತಿಗಳನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಕಂಡುಬಂದಿದ್ದು ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಉಬ್ಬು ಶಿಲ್ಪದ ಕೆತ್ತನೆಯನ್ನು ಖಂಡರಿಸಲಾಗಿದೆ.

ಒಟ್ಟಾರೆ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಪ್ರಾಂತ್ಯದಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳ ಆಡಳಿತ, ಇಲ್ಲಿ ದೊರೆತ ವೀರಗಲ್ಲುಗಳ ಅಧ್ಯಯನ ಮಾಡಿದಾಗ ಇವುಗಳು ಸುಮಾರು ೧೦ನೇ ಶತಮಾನದಿಂದ ೧೪–೧೫ನೇ ಶತಮಾನದವರೆಗಿನ ವೀರಗಲ್ಲುಗಳಾಗಿವೆ. ಈ ವೀರಗಲ್ಲುಗಳು ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ ಶೈವ ಮತ್ತು ವೈಷ್ಣವ ಧರ್ಮದ ಸಂಕೇತವಾಗಿವೆ. ಪ್ರಸ್ತುತ ಈ ಪ್ರಾಂತ್ಯದಲ್ಲಿ ಧಾರ್ಮಿಕ ಸಾಮರಸ್ಯದ ಪ್ರಭಾವ ಹೆಚ್ಚಾಗಿದ್ದು ಪ್ರಸ್ತುತದ ದಿನಗಳಲ್ಲಿ ಗ್ರಾಮಸ್ಥರು ಕೆಲವು ವೀರಗಲ್ಲುಗಳಿಗೆ ಸುಣ್ಣದ ಲೇಪನ ಮತ್ತು ಕೆಲವು ವೀರಗಲ್ಲುಗಳಿಗೆ ಕಪ್ಪು ಬಣ್ಣದ ಲೇಪನವನ್ನು ಮಾಡಿ ಹಬ್ಬ ಹರಿದಿನಗಳಲ್ಲಿ ಜಾತ್ರಾ ಮಹೋತ್ಸವಗಳಲ್ಲಿ ವಿವಿಧ ರೀತಿಯ ಪೂಜಾ ಕೈಂಕರ್ಯಗಳನ್ನು ನೆರವೇರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ.

**ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು**



1. ವೀರಗಲ್ಲು



2. ವೀರಗಲ್ಲು



3. ವೀರಗಲ್ಲು



4. ಒಕ್ಕೈ ಮಾಸ್ತಿಕಲ್ಲು



5. ವೀರಗಲ್ಲು



6. ವೀರಗಲ್ಲು



7. ವೀರಗಲ್ಲು



8. ವೀರಮಾಸ್ತಿಕಲ್ಲು



9. ವೀರಗಲ್ಲು



10 ವೀರಮಾಸ್ತಿಕಲ್ಲು



11 ವೀರಗಲ್ಲು



12. ವೀರಗಲ್ಲು



13. ವೀರಗಲ್ಲು



14. ರಾಜ



15. ವೀರಮಾಸ್ತಿಕಲ್ಲು



16. ವೀರಮಾಸ್ತಿಕಲ್ಲು

**ಅಡಿ ಟಿಪ್ಪಣಿಗಳು**

೧. ಸೂರ್ಯನಾಥ ಕಾಮತ್ ಯು (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–೧, ಕರ್ನಾಟಕ ಸರ್ಕಾರ, ಬೆಂಗಳೂರು–೧೯೮೪

೨. ಶೇಷಶಾಸ್ತ್ರಿ, ಆರ್– ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೨೦೧೦.

೩. ತಿಪ್ಪೆರುದ್ರಸ್ವಾಮಿ, ಹೆಚ್– ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು–೨೦೧೦

೪. ಪರಶಿವಮೂರ್ತಿ. ಡಿ.ವಿ– ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–೧೯೯೯.

೫. ಚಿದಾನಂದಮೂರ್ತಿ,ಎಂ– ಕನ್ನಡ ಶಾಸನಗಳ ಸಂಸ್ಕೃತಿಕ ಅಧ್ಯಯನ, ಬೆಂಗಳೂರು–೨೦೦೨

೬. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೨೦೦೫

೭. ಪೋಟೋದಲ್ಲಿನ ಚಿತ್ರವನ್ನು ಗಮನಿಸಿ, ಚಿತ್ರ ಸಂಖ್ಯೆ–೧ ರಿಂದ ೧೬.